# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.649/2025

ಸಾಕ್ಷಿದಾರರ ಹೇಳಿಕೆಃ

**ಹೆಸರು** : ಗಿರೀಶ ಹೆಚ್ ಕೆ ಚಾಸಾಃ **2** ಪ್ರಾಸಾಃ **3**

**ತಂದೆಯ ಹೆಸರು** : ಹನುಮಗೌಡ

**ವಯಸ್ಸು** : 35 ವರ್ಷ

**ವೃತ್ತಿ** : ವ್ಯವಸಾಯ

**ವಾಸಸ್ಥಳ** : ಹೊನ್ನಾಳಿ

ದಿನಾಂಕಃ **13-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ಆರೋಪಿ ಗೊತ್ತಿಲ್ಲ. ಈಗೇ ಸುಮಾರು 1 ವರ್ಷಗಳ ಹಿಂದೆ ನನ್ನ ವೈಯಕ್ತಿಕ ಕೆಲಸದ ನಿಮಿತ್ತ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರ ಕೋರಿಕೆಯ ಮೇರೆಗೆ 5 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮದ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಮತ್ತು ಮದ್ಯದ ಪೌಚ್ ಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಸ್ಥಳ ಮಹಜರ್ ಅನ್ನು ಈಗಾಗಲೇ ನಿಪಿ-7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು, ಶೋಧನಾ ಸಮುಚ್ಚಿತ ವಾರೆಂಟನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು, ಸ್ವತ್ತಿನ ಪಟ್ಟಿಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ಮಾದರಿ ಮೊಹರಿನ ನಕಲನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು,

ಪೊಲೀಸರು ನೀಡಿದ ನೋಟೀಸನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ದಿನಾಂಕಃ 19-10-2024 ರಂದು ಚಾಸಾ-1 ಮತ್ತು 3 ರವರು ಕೂಲಂಬಿ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಚಾಸಾ-1 ರವರಿಗೆ ಬನ್ನಿಕೋಡು ಗ್ರಾಮದ ಬಸ್ ನಿಲ್ದಾಣ ದ ಬಳಿ ಒಬ್ಬ ಆಸಾಮಿಯು ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ ನಂತರ ಕೂಲಂಬಿ ಬಸ್ ನಿಲ್ದಾಣ ದ ಬಳಿ ಇದ್ದ ನನಗೆ ಸದರಿ ಮೇಲ್ಕಂಡ ಮಾಹಿತಿಯನ್ನು ತಿಳಿಸಿ ನಂತರ ಚಾಸಾ-1 ರವರು ನನಗೆ ನೋಟೀಸನ್ನು ಜಾರಿ ಮಾಡಿ ನನ್ನನ್ನು ತಮ್ಮ ಇಲಾಖೆಯ ಜೀಪಿನಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಸದರಿ ವ್ಯಕ್ತಿಯು ನಮ್ಮನ್ನ ನೋಡಿ ಓಡಿ ಹೋಗಲು ಪ್ರಯತ್ನಿಸಿದರು ಆ ಸಮಯದಲ್ಲಿ ಚಾಸಾ-1 ಮತ್ತು 3 ರವರು ಸದರಿ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದರು ಸದರಿ ವ್ಯಕ್ತಿ ಸಿಕ್ಕಿರುವುದಿಲ್ಲ ಎಂದು ನಂತರ ಸ್ಥಳೀಯರನ್ನು ವಿಚಾರಿಸಲಾಗಿ ಅವನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಪವನ್ ಕುಮಾರ್ ಟಿ ಜಿ ಬಿನ್ ಗದಿಗೆಪ್ಪ, ಬನ್ನಿಕೋಡು ಗ್ರಾಮದ ವಾಸಿ ಎಂದು ತಿಳಿಸಿದರು ಎಂದು ನಂತರ ಸದರಿ ಚೀಲವನ್ನು ಪರಿಶೀಲನೆ ಮಾಡಲು ಶೋಧನಾ ಸಮುಚ್ಚಿತ ವಾರೆಂಟನ್ನು ಚಾಸಾ-1 ರವರು ತಯಾರಿಸಿ ನಂತರ ಸ್ಥಳದಲ್ಲಿದ್ದ ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 90 ಎಂ ಎಲ್ ನ ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 45 ಟೆಟ್ರಾ ಪ್ಯಾಕೇಟ್ ಗಳು ಇದ್ದವು ಎಂದು ನಂತರ ಚಾಸಾ-1 ರವರು ಸದರಿ ಮದ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಳ್ಳಲು ಅಮಾನತ್ತು ಮಹಜರ್ ಕ್ರಮವನ್ನು ಚಾಸಾ-1 ರವರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಸಂಜೆ 05-10 ರಿಂದ 06-10 ಗಂಟೆ ಸಮಯದಲ್ಲಿ ಜರುಗಿಸಿ ಚಾಸಾ-1, ನಾನು ಮತ್ತು ಚಾಸಾ-3 ರವರು ಸಹಿಯನ್ನು ಮಾಡಿರುತ್ತೇವೆ ಎಂದು ನಂತರ ಸದರಿ 96 ಮದ್ಯದ ಟೆಟ್ರಾ ಪ್ಯಾಕೇಟ್ ಗಳಲ್ಲಿ 45 ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬಿಳಿಚೀಲದಲ್ಲಿ ಹಾಕಿ ಎಸ್ ಹೆಚ್ ಓ ಎಂದು ಅರಗು ಸೀಲು ಮಾಡಿ ನನ್ನ ಮತ್ತು ಚಾಸಾ-

1 ರವರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಎಂದು ಮತ್ತು ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-12 ರಂತೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.